KACD410001052026

Presented on : 30-01-2026
Registered on : 30-01-2026
Decided on : 04-04-2026
Duration : 04D-02M-00Y

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಹೊಳಲ್ಕೆರೆ.**

**ಉಪಸ್ಥಿತರು**

ಶ್ರೀ ರಘುರಾಮ ಎನ್.ಎಸ್., ಬಿ.ಎ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

**ದಿನಾಂಕ 4 ನೇ ಏಪ್ರಿಲ್, 2026**

**ಎಫ್.ಡಿ.ಪಿ. ಸಂಖ್ಯೆ-2/2026**

ಅರ್ಜಿದಾರರುಃ

ಬ್ಯಾಂಕ್ ಆಫ್ ಬರೋಡಾ,
ಹೊಳಲ್ಕೆರೆ ಶಾಖೆ,
ಇವರ ಪರವಾಗಿ ಪ್ರತಿನಿಧಿಸುವವರು
ಹಿರಿಯ ಶಾಖಾ ವ್ಯವಸ್ಥಾಪಕರು
ಮತ್ತು ಮುಕ್ತಿಯಾರನಾಮೆದಾರರು,
ಶ್ರೀ ಮಧು ಎಂ.
ಬಿನ್ ಮಹಾಲಿಂಗಪ್ಪ,
ವಯಸ್ಸುಃ ಸುಮಾರು 35 ವರ್ಷ,
ವಾಸಃ ಗಣಪತಿ ರಸ್ತೆ,
ಹೊಳಲ್ಕೆರೆ ಟೌನ್, ಚಿತ್ರದುರ್ಗ ಜಿಲ್ಲೆ.

(ಪ್ರತಿನಿಧಿಸುವವರುಃ ಶ್ರೀ ಎಸ್. ವೇದಮೂರ್ತಿ, ನ್ಯಾಯವಾದಿಗಳು)

**-ವಿರುದ್ಧ-**

ಎದುರುದಾರರುಃ 1. ರಾಮಾನಾಯ್ಕ ಬಿನ್ ಲಚ್ಚಾನಾಯ್ಕ,
ವಯಸ್ಸುಃ ಸುಮಾರು 65 ವರ್ಷ,

2. ಹಾಲೇಶನಾಯ್ಕ ಬಿನ್ ರಾಮಾನಾಯ್ಕ,
ವಯಸ್ಸುಃ ಸುಮಾರು 40 ವರ್ಷ,

3. ತಿಪ್ಪೇಶನಾಯ್ಕ ಬಿನ್ ರಾಮಾನಾಯ್ಕ,
ವಯಸ್ಸುಃ ಸುಮಾರು 37 ವರ್ಷ,

4. ಕೆ.ಬಿ. ಪರಮೇಶ್ವರನಾಯ್ಕ ಬಿನ್ ಬಜನನಾಯ್ಕ,
ವಯಸ್ಸುಃ ಸುಮಾರು 55 ವರ್ಷ,

ಎಲ್ಲರೂ ವ್ಯವಸಾಯಗಾರರು ಮತ್ತು
ವಾಸಃ ಸಿಹಿನೀರಕಟ್ಟೆ ಗ್ರಾಮ,
ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

(ಏಕತರ್ಫೀಯ)

*****

**ತೀರ್ಪು**

ಪ್ರಸ್ತುತ ಈ ಅಂತಿಮ ಡಿಕ್ರಿ ಅರ್ಜಿಯನ್ನು ಅರ್ಜಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 34 ನಿಯಮ 4, 5 ಮತ್ತು 6 ಸಹವಾಚಕ ಆಸ್ತಿ ವರ್ಗಾವಣೆ ಕಾಯಿದೆ ಕಲಂ 67 ರ ಅಡಿಯಲ್ಲಿ ಸಲ್ಲಿಸಿದ್ದು, ಅಸಲು ದಾವಾ ಸಂಖ್ಯೆ-37/2025 ರ ನೋಂದಣಿ ಸರಳ ಅಡಮಾನ ಪತ್ರದ ಕುರಿತಾದ ಪ್ರಾಥಮಿಕ ಡಿಕ್ರಿಯಂತೆ ಎದುರುದಾರರಿಂದ ಪ್ರಾಥಮಿಕ ಡಿಕ್ರಿಯ ಮೊತ್ತವನ್ನು ಡಿಕ್ರಿಯ ಆದೇಶದಂತೆ ಬಡ್ಡಿಸಹಿತ ಹಣದ ವಸೂಲಾತಿಗಾಗಿ ಅಂತಿಮ ಡಿಕ್ರಿ ಅರ್ಜಿಯ ಸ್ವತ್ತುಗಳನ್ನು ಮಾರಾಟ ಮಾಡಿ ಆ ಮೂಲಕ ಪ್ರಾಥಮಿಕ ಡಿಕ್ರಿಯ ಮೊತ್ತವನ್ನು ವಸೂಲಿ ಮಾಡಿಕೊಳ್ಳಲು ಅಂತಿಮ ಡಿಕ್ರಿ ಆದೇಶವನ್ನು ಮಾಡಿಕೊಡುವಂತೆ ಕೋರಿರುತ್ತಾರೆ.

2. ಅರ್ಜಿದಾರರ ಅರ್ಜಿಯ ಸಂಕ್ಷಿಪ್ತ ವಿವರಣೆ ಈ ಕೆಳಕಂಡಂತೆ ಇದೆಃ-

ಅರ್ಜಿದಾರರು ಎದುರುದಾರರ ವಿರುದ್ಧ ರೂ.5,33,301/- ಮೊತ್ತವನ್ನು ವಾರ್ಷಿಕ ಶೇಕಡ 10.75ರ ಬಡ್ಡಿ ದರದಲ್ಲಿ ವಸೂಲಾತಿಗಾಗಿ ಹೊಳಲ್ಕೆರೆಯ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ-37/2025ನ್ನು ಸಲ್ಲಿಸಿದ್ದರು. ನ್ಯಾಯಾಲಯವು ಸದರಿ ದಾವೆಯ ಕುರಿತಾಗಿ ದಿನಾಂಕ 27.11.2025 ರ ಡಿಕ್ರಿಯಂತೆ ಎದುರುದಾರರು ಅರ್ಜಿದಾರರಿಗೆ ದಾವೆಯಲ್ಲಿ ಕೋರಿರುವ ಮೊತ್ತವನ್ನು ಮತ್ತು ಸದರಿ ಮೊತ್ತಕ್ಕೆ ವಾರ್ಷಿಕ ಶೇಕಡ ರೂ.6 ರ ಬಡ್ಡಿ ದರದಂತೆ ದಾವೆ ದಾಖಲು ಮಾಡಿದ ದಿನಾಂಕದಿಂದ ಸಂಪೂರ್ಣ ಹಣವನ್ನು ಪಾವತಿಸುವ ದಿನಾಂಕದವರೆಗೆ ನಿಗದಿಪಡಿಸಿ ಡಿಕ್ರಿ ಮಾಡಿರುತ್ತದೆ. ಆದಾಗ್ಯೂ ಎದುರುದಾರರು ಅರ್ಜಿದಾರರಿಗೆ ಸದರಿ ಡಿಕ್ರಿಯ ಕುರಿತಾಗಿ ಸಾಲವನ್ನು ಮತ್ತು ಬಡ್ಡಿಯನ್ನು ಪಾವತಿಸಿರುವುದಿಲ್ಲ. ಆದ್ದರಿಂದ ಅರ್ಜಿದಾರರು ಈ ಅಂತಿಮ ಡಿಕ್ರಿ ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿಯಲ್ಲಿ ಕೋರಿರುವಂತೆ ಅಂತಿಮ ಡಿಕ್ರಿಯನ್ನು ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. ಸದರಿ ಅರ್ಜಿಯನ್ನು ದಾಖಲಿಸಿಕೊಂಡ ನಂತರ ನ್ಯಾಯಾಲಯವು ಎದುರುದಾರರಿಗೆ ನೋಟಿಸನ್ನು ಜಾರಿ ಮಾಡಲು ಆದೇಶಿಸಿರುತ್ತದೆ. ಅದರಂತೆ ಎದುರುದಾರರು ನೋಟಿಸನ್ನು ಸ್ವೀಕರಿಸಿ ನಂತರ ನ್ಯಾಯಾಲಯಕ್ಕೆ ಗೈರುಹಾಜರಾಗಿರುತ್ತಾರೆ.

4. ಈ ಮೇಲ್ಕಂಡ ಸಂಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಪ್ರಸ್ತುತ ಈ ಅರ್ಜಿಯನ್ನು ಇತ್ಯರ್ಥಪಡಿಸಲು ಈ ಕೆಳಕಂಡ ಅಂಶಗಳು ನ್ಯಾಯಾಲಯದ ಅವಗಾಹನೆಗೆ ಬರುತ್ತವೆಃ-

1. ಅರ್ಜಿದಾರರು ಅರ್ಜಿಯಲ್ಲಿ ಕೋರಿರುವಂತೆ, ಅಸಲು ದಾವಾ ಸಂಖ್ಯೆ-37/2025ರ ಪ್ರಾಥಮಿಕ ಡಿಕ್ರಿಯಂತೆ, ಸದರಿ ಪ್ರಾಥಮಿಕ ಡಿಕ್ರಿಯ ಹಣದ ವಸೂಲಾತಿಗಾಗಿ ಅಂತಿಮ ಡಿಕ್ರಿ ಅರ್ಜಿಯ ಸ್ವತ್ತುಗಳನ್ನು ಮಾರಾಟ ಮಾಡುವ ಪ್ರಕ್ರಿಯೆಯ

ಮೂಲಕ ಹಣದ ವಸೂಲಾತಿಯನ್ನು ಮಾಡಿಕೊಳ್ಳಲು ಅಂತಿಮ ಡಿಕ್ರಿಯನ್ನು ಪಡೆಯಲು ಅರ್ಹರೇ?

2. ಹಾಗಾದರೆ ಯಾವ ಆದೇಶ?

5. ಅರ್ಜಿದಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಈ ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆಃ-

ಅಂಶ – 1 : ಸಕಾರಾತ್ಮಕವಾಗಿ,

ಅಂಶ – 2 : ಅಂತಿಮ ಆದೇಶದಂತೆ.

## ಕಾ ರ ಣ ಗ ಳು

**7. ಅಂಶ – 1:-** ಈ ಅಂಶದ ಕುರಿತು ಪರಿಶೀಲಿಸಲಾಗಿ, ಅರ್ಜಿದಾರರು ಎದುರುದಾರರ ವಿರುದ್ಧ ಅಸಲು ದಾವಾ ಸಂಖ್ಯೆ-37/2025 ನ್ನು ಸಲ್ಲಿಸಿದ್ದು, ಸದರಿ ದಾವೆಯ ಕುರಿತು ನ್ಯಾಯಾಲಯವು ದಿನಾಂಕ 27.11.2025 ರ ಡಿಕ್ರಿಯಂತೆ ಪ್ರತಿವಾದಿಯರು ವಾದಿಗೆ ರೂ.5,33,301/- ಮೊತ್ತವನ್ನು ಮತ್ತು ದಾವೆಯನ್ನು ಸಲ್ಲಿಸಿದ ದಿನಾಂಕದಿಂದ ಡಿಕ್ರಿಯ ದಿನಾಂಕದವರೆಗೆ ಹಾಗೂ ಡಿಕ್ರಿಯ ದಿನಾಂಕದಿಂದ ಹಣವನ್ನು ಪಾವತಿಸುವ ದಿನಾಂಕದವರೆಗೂ ರೂ.5,00,000/- ಮೊತ್ತಕ್ಕೆ ವಾರ್ಷಿಕ ಶೇಕಡ ರೂ.6 ರ ಬಡ್ಡಿ ದರದಲ್ಲಿ ಪಾವತಿಸುವಂತೆ ಸೂಚಿಸಿರುತ್ತದೆ. ಒಂದೊಮ್ಮೆ ಪ್ರತಿವಾದಿಯರು ಹಣವನ್ನು ಪಾವತಿಸಲು ವಿಫಲರಾದಲ್ಲಿ ಪ್ರಾಥಮಿಕ ಡಿಕ್ರಿಯನ್ನು ಜಾರಿಗೊಳಿಸುವ ಕುರಿತು ಹಕ್ಕನ್ನು ಹೊಂದಿರುತ್ತದೆ. ಅರ್ಜಿದಾರರು ಎದುರುದಾರರನ್ನು ಪ್ರಾಥಮಿಕ ಡಿಕ್ರಿಯ ಪ್ರಕಾರ ಹಣವನ್ನು ಪಾವತಿ ಮಾಡುವಂತೆ ಕೇಳಿದ್ದಾಗ್ಯೂ ಕೂಡ ಅರ್ಜಿದಾರರು ಡಿಕ್ರಿಯ ಮೊತ್ತವನ್ನು ಪಾವತಿಸಿರುವುದಿಲ್ಲ. ಹಾಗಾಗಿ ಅರ್ಜಿದಾರರು ಈ ಅಂತಿಮ ಡಿಕ್ರಿ ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿಯಲ್ಲಿ ಕೋರಿರುವಂತೆ ಅಂತಿಮ ಡಿಕ್ರಿಯನ್ನು ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ. ಆದ್ದರಿಂದ ಅರ್ಜಿದಾರರು ಸಲ್ಲಿಸಿರುವಂತಹ ಅರ್ಜಿಯನ್ನು ಪುರಸ್ಕರಿಸುವುದು ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಅಗತ್ಯತೆ ಇದೆ ಎಂದು ಕಂಡುಬರುತ್ತದೆ.

8. ಅರ್ಜಿದಾರರು ಈ ಅರ್ಜಿಗೆ ಪೂರಕವಾಗಿ ತನ್ನನ್ನು ತಾನು ಪಿಡಬ್ಲೂ-1 ಎಂದು ಸಾಕ್ಷ್ಯ ಮಾಡಿಸಿದ್ದು, ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ಮತ್ತು 2 ರಂತೆ ಅಸಲು ದಾವಾ ಸಂಖ್ಯೆ-37/2025 ರ ದಿನಾಂಕ 27.11.2025 ರ ತೀರ್ಪು ಮತ್ತು ಪ್ರಾಥಮಿಕ ಡಿಕ್ರಿಯ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ತೀರ್ಪು ಮತ್ತು ಪ್ರಾಥಮಿಕ ಡಿಕ್ರಿಯಂತೆ ಪ್ರತಿವಾದಿಯರು ವಾದಿಗೆ ರೂ.5,33,301/- ಮೊತ್ತವನ್ನು ಮತ್ತು ದಾವೆಯನ್ನು ಸಲ್ಲಿಸಿದ ದಿನಾಂಕದಿಂದ ಡಿಕ್ರಿಯ ದಿನಾಂಕದವರೆಗೆ ಹಾಗೂ ಡಿಕ್ರಿಯ ದಿನಾಂಕದಿಂದ ಹಣವನ್ನು ಪಾವತಿಸುವ ದಿನಾಂಕದವರೆಗೂ ರೂ.5,00,000/- ಮೊತ್ತಕ್ಕೆ ವಾರ್ಷಿಕ ಶೇಕಡ ರೂ.6 ರ ಬಡ್ಡಿ ದರದಲ್ಲಿ ಪಾವತಿಸುವಂತೆ ಸೂಚಿಸಿರುತ್ತದೆ. ಒಂದೊಮ್ಮೆ ಎದುರುದಾರರು ಸದರಿ ಮೊತ್ತವನ್ನು ಪಾವತಿಸಲು ವಿಫಲರಾದಲ್ಲಿ ಸದರಿ ಮೊತ್ತವನ್ನು ಪ್ರಾಥಮಿಕ ಡಿಕ್ರಿಯ ಜಾರಿಗೊಳಿಸುವಿಕೆಯ ಮೂಲಕ ಪಡೆದುಕೊಳ್ಳಲು ಅರ್ಹರಿರುತ್ತಾರೆ ಎಂದು ನಿರ್ಣಯಿಸಿರುತ್ತದೆ. ಈ ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ, ಅರ್ಜಿದಾರರು ಸಲ್ಲಿಸಿರುವಂತೆ ಅಂತಿಮ ಡಿಕ್ರಿ ಅರ್ಜಿಯ ಸ್ವತ್ತಿನ ಕುರಿತಾಗಿ ಕ್ರಯದ ಪ್ರಕ್ರಿಯೆಯ ಮೂಲಕ ಅಸಲು ದಾವಾ ಸಂಖ್ಯೆ-37/2025 ರ ಹಣವನ್ನು ವಸೂಲಿ ಮಾಡಿಕೊಳ್ಳಲು ಅರ್ಹರಿರುತ್ತಾರೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

9. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ, ಎದುರುದಾರರು ಅರ್ಜಿದಾರರಿಗೆ ಅಸಲು ದಾವಾ ಸಂಖ್ಯೆ-37/2025 ರ ಪ್ರಾಥಮಿಕ ಡಿಕ್ರಿಯಂತೆ ಹಣವನ್ನು ಪಾವತಿ ಮಾಡಿರುವುದಿಲ್ಲ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಅಂತೆಯೇ ಅಂತಿಮ ಡಿಕ್ರಿ ಅರ್ಜಿಯಲ್ಲಿ ನಮೂದಿಸಿರುವಂತಹ ಸ್ವತ್ತಿನ ಕುರಿತಾಗಿ ಈಗಾಗಲೇ ಅಸಲು ದಾವಾ ಸಂಖ್ಯೆ-37/2025 ರಲ್ಲಿ ಪ್ರಾಥಮಿಕ ಡಿಕ್ರಿಯಂತೆ ಕ್ರಯದ ಪ್ರಕ್ರಿಯೆಯ ಮೂಲಕ ಹಣವನ್ನು ವಸೂಲಿ ಮಾಡಿಕೊಳ್ಳಬಹುದು ಎಂದು ನಿರ್ಣಯಿಸಿರುತ್ತದೆ. ಈ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ, ಅಸಲು ದಾವಾ ಸಂಖ್ಯೆ-37/2025 ರ ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಕ್ರಯದ ಪ್ರಕ್ರಿಯೆಯ ಮೂಲಕ ಪ್ರಾಥಮಿಕ ಡಿಕ್ರಿಯ ಹಣವನ್ನು ವಸೂಲಿ ಮಾಡಿಕೊಳ್ಳಲು ಅನುವು ಮಾಡಿಕೊಡುವುದು ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಅಗತ್ಯತೆ ಇದೆ

ಎಂದು ಕಂಡುಬರುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ಅಂಶ-1 ನ್ನು ಸಕಾರಾತ್ಮಕ ಎಂದು ನಿರ್ಣಯಿಸಿರುತ್ತದೆ.

**10. <u>ಅಂಶ-2:-</u>** ಅಂಶ-1 ನ್ನು ಸಕಾರಾತ್ಮಕ ಎಂದು ನಿರ್ಣಯಿಸಿದ್ದು, ಈ ಕೆಳಕಂಡಂತೆ ಆದೇಶ ಮಾಡಲಾಗಿದೆಃ-

## ಆದೇಶ

ಅರ್ಜಿದಾರರು ಸಲ್ಲಿಸಿರುವ ಅಂತಿಮ ಡಿಕ್ರಿ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಅಸಲು ದಾವಾ ಸಂಖ್ಯೆ-37/2025 ರ ದಿನಾಂಕ 27.11.2025 ರ ಪ್ರಾಥಮಿಕ ಡಿಕ್ರಿಯಂತೆ ಅಂತಿಮ ಡಿಕ್ರಿಯ ಅರ್ಜಿಯಲ್ಲಿ ನಮೂದಿಸಿರುವ ಸ್ವತ್ತಿನ ಕುರಿತಾಗಿ ಕ್ರಯದ ಪ್ರಕ್ರಿಯೆಯ ಮೂಲಕ ಹಣವನ್ನು ವಸೂಲಿ ಮಾಡಿಕೊಳ್ಳಲು ಅರ್ಜಿದಾರರು ಅರ್ಹರಿರುತ್ತಾರೆ ಎಂದು ನಿರ್ಣಯಿಸಲಾಗಿದೆ.

ಈ ಮೇಲ್ಕಂಡಂತೆ ಅಂತಿಮ ಡಿಕ್ರಿ ಮಾಡತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 4 ನೇ ಏಪ್ರಿಲ್, 2026 ರಂದು ನಾನು ಉದ್ಘೋಷಿಸಿದ್ದೇನೆ.)

(ರಘುರಾಮ ಎನ್.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

## ಅನುಬಂಧ

**<u>ಅರ್ಜಿದಾರರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-</u>**

ಪಿ.ಡಬ್ಲ್ಯೂ-1 : ಮಧು ಎಂ.

**<u>ಅರ್ಜಿದಾರರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-</u>**

ನಿಪಿ-1 : ಅಸಲು ದಾವಾ ಸಂಖ್ಯೆ-37/2025 ರ ತೀರ್ಪು

ನಿಪಿ-2 : ಅಸಲು ದಾವಾ ಸಂಖ್ಯೆ-37/2025 ರ ಡಿಕ್ರಿ

**<u>ಎದುರುದಾರರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-</u>**

- ಇಲ್ಲ -

**<u>ಎದುರುದಾರರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-</u>**

- ಇಲ್ಲ -

(ರಘುರಾಮ ಎನ್.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.